ಆರ್.ಸಿ.ಸಿ.	31
ಮಂಗಳೂರು ಹೆಂಚಿನ ಮನೆ	42
ಎ.ಸಿ.ಸಿ. ಶೀಟಿನ ಮನೆ	43
ಗುಡಿಸಲು	43
ತಳಪಾಯ ಕಟ್ಟಡ	18
ಒಟ್ಟು	177

ಇ) ಸರ್ವೆ ಕಾರ್ಯ ಮುಗಿದ ನಂತರ ಪರಿಶೀಲಿಸಲಾಗುವುದು.

ರಾಜ್ಯದಲ್ಲಿನ ನೂತನ ಪ್ರವಾಸೋದ್ಯಮ ನೀತಿ

1189(1917) ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೂತನ ಪ್ರವಾಸೋದ್ಯಮ ನೀತಿಯನ್ನು ರೂಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಇದರ ಮುಖ್ಯಾಂಶಗಳೇನು?

ಇ) ಈ ನೂತನ ನೀತಿಯಿಂದಾಗಿ ಪ್ರವಾಸಿಗರಿಗೆ ದೊರಕುವ ವಿಶೇಷತೆಗಳೇನು?

ಶ್ರೀ ಆರ್.ವಿ. ದೇಶ್‌ಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹೌದು - Yes.

ಆ) 1. ಭೂ ಪರಿವರ್ತನಾ ಶುಲ್ಕ ವಿನಾಯಿತಿ.

2. ರೂ. 50.00 ಕೋಟಿಗಳಿಗೆ ಕಡಿಮೆ / ಹೆಚ್ಚು ಬಂಡವಾಳ ಹೂಡಿಕೆಗೆ ಶೇಕಡ 50 / ಶೇಕಡ 100 ರಷ್ಟು ಸ್ಟಾಂಪ್ ಸುಂಕದಿಂದ ವಿನಾಯಿತಿ.

3. ರೂ. 1,000/-ಗಳಿಗೆ ರೂ. 1.00 ರಂತೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ.

4. ಯೋಜನೆ ಜಾರಿಗೆ ಬಂದ ಮೂರು ವರ್ಷಗಳ ಅವಧಿಗೆ ಪ್ರವೇಶ ತೆರಿಗೆ ವಿನಾಯಿತಿ.

5. ಸರ್ಕಾರಿ ಜಮೀನನ್ನು ಶೇಕಡ 50ರಷ್ಟು ಮಾರುಕಟ್ಟೆ ಬೆಲೆಯಲ್ಲಿ ಖಾಸಗಿ ಉದ್ಯಮಿಗಳಿಗೆ ಪ್ರವಾಸೋದ್ಯಮ ಯೋಜನೆಗಳನ್ನು ನಿರ್ಮಿಸಲು ನೀಡುವುದು.

6. ಏವಿಯೇಷನ್ ಟರ್ಬೈನ್ ಇಂಧನದ ಶುಲ್ಕ ಶೇಕಡ 4ರಷ್ಟು ಇಳಿತ ಮತ್ತು ಖಾಸಗಿ ವಾಯುಯಾನ ಸಂಸ್ಥೆಗಳಿಗೆ ಮೊದಲ ಮೂರು ವರ್ಷದಲ್ಲಿ ಶೇಕಡ 50 ರಷ್ಟು ಭಾಗದ ಟಿಕೇಟ್‌ಗಳಿಗೆ ಖಾತರಿ.

7. ರೂ. 400.00 ಮೇಲ್ಪಟ್ಟು ಕೊಠಡಿ ಬಾಡಿಗೆಗೆ ವಿಲಾಸ ತೆರಿಗೆಯನ್ನು ಬಾಡಿಗೆ ಪಾವತಿಸಿದ ಮೊತ್ತಕ್ಕೆ ಮಾತ್ರ ಪಾವತಿಸುವುದು. ಇದಕ್ಕೆ ಶೇಕಡ 10ರ ಮಿತಿಯನ್ನು ವಿಧಿಸುವುದು.

8. ಏಮ್ಯಾಕ್ ಥಿಯೇಟರ್‌ಗಳಿಗೆ ಮೊದಲ ಮೂರು ವರ್ಷಗಳಿಗೆ ಶೇಕಡ 100 ನಂತರ ಎರಡು ವರ್ಷಗಳಿಗೆ ಶೇಕಡ 75ರಷ್ಟು ಮನೋರಂಜನಾ ತೆರಿಗೆ ವಿನಾಯಿತಿ.

9. ಅಂತರ ರಾಜ್ಯಗಳ ಮಧ್ಯೆ ಓಡಾಡುವ ವಾಹನಗಳಿಗೆ ವಿಧಿಸುವ ತೆರಿಗೆಯನ್ನು ಪರಸ್ಪರ ಸಮ್ಮತಿಸುವ ತೆರಿಗೆಗೆ ನಿಗಧಿಪಡಿಸುವುದು.

10. ಆಮದು ಮಾಡಿಕೊಂಡ ಮದ್ಯಕ್ಕೆ ವಿಧಿಸುವ ಶೇಕಡ 66ರಷ್ಟು ಹೆಚ್ಚುವರಿ ರಾಜ್ಯ ಅಬಕಾರಿ ಸುಂಕವನ್ನು ಶೇಕಡ 25ಕ್ಕೆ ಇಳಿಸುವುದು ಅಥವಾ ಮೂಲದರದ ಮೇಲೆ ತೆರಿಗೆ ವಿಧಿಸುವುದು.

11.ರಾಜ್ಯದ ಕೈಗಾರಿಕಾ ನೀತಿ (20001-2006)ಯಲ್ಲಿ ನೀಡಲಾಗಿರುವ ರಿಯಾಯಿತಿ ಮತ್ತು ಉತ್ತೇಜನಗಳನ್ನು ಪ್ರವಾಸೋದ್ಯಮ ರಂಗದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ನೀಡಲಾಗುವುದು.

ಇ) ಪ್ರವಾಸಿಗರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವಂತಾಗುತ್ತದೆ.

ಬೆಂಗಳೂರು ನಗರದಲ್ಲಿ ವಾಹನಗಳಿಂದ ಪರಿಸರ ಮಾಲಿನ್ಯ

1190(1918) ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಬೆಂಗಳೂರು ನಗರದಲ್ಲಿ ವಾಹನಗಳ ದಟ್ಟಣೆಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯದಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಮಾಲಿನ್ಯ ನಿಯಂತ್ರಣಕ್ಕೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

1. ಹೌದು

2.ಅ) ಬೆಂಗಳೂರಿನಲ್ಲಿ ವಾಯು ಮಾಲಿನ್ಯ ನಿಯಂತ್ರಿಸಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕಾರ್ಯಾಚರಣೆ ಪಡೆಯನ್ನು ರಚಿಸಲಾಗಿದೆ.

ಆ) ಬೆಂಗಳೂರು ನಗರದಲ್ಲಿ 167 ವಾಯು ಮಾಲಿನ್ಯ ತಪಾಸಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಇವುಗಳಲ್ಲಿ 126 ಗಣಕೀಕೃತ ಕೇಂದ್ರಗಳಾಗಿವೆ.

ಇ) ಸಾರಿಗೆ ಇಲಾಖೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ ಜಂಟಿ ಉಸ್ತುವಾರಿಯಲ್ಲಿ ಬೆಂಗಳೂರು ನಗರದಲ್ಲಿನ ವಾಹನಗಳಿಂದಾಗುವ ವಾಯು ಮಾಲಿನ್ಯವನ್ನು ನಿಯಂತ್ರಿಸಲು 5 ಪರಿಸರ ವಾಹಿನಿ ವಾಹನಗಳು ಕಾರ್ಯನಿರ್ವಹಿಸುತ್ತಿವೆ.

ಈ) ಬೆಂಗಳೂರಿನ ಪ್ರಮುಖ ಸ್ಥಳಗಳಲ್ಲಿ ಸಂಚಾರಿ ಪರಿವೇಷ್ಟಕ ವಾಯು ಗುಣಮಾಪನ ಘಟಕ ಕಾರ್ಯನಿರ್ವಹಿಸುತ್ತಿದೆ.

ಉ) ದಿನಾಂಕ 1-7-2003 ರಿಂದ ಅನ್ವಯವಾಗುವಂತೆ ಮೂರು ಹಂತಗಳಲ್ಲಿ 15 ವರ್ಷ ಮತ್ತು ಮೇಲ್ಪಟ್ಟ ವಾಹನಗಳು ಬೆಂಗಳೂರು ನಗರವನ್ನು ಹೊರ ವರ್ತುಲ ರಸ್ತೆಯಿಂದ ಪ್ರವೇಶಿಸದಂತೆ ನಿಷೇಧಿಸಲಾಗಿದೆ.

ಊ)ಜೂನ್ 2003ರಿಂದ ಶೇಕಡ 5 ರಷ್ಟು ಇಥೆನಾಲ್ ಮಿಶ್ರಣ ಮಾಡಿದ ಪೆಟ್ರೋಲ್ ವಿತರಿಸಲಾಗುವುದು.

ಋ) ಮೋಟಾರು ವಾಹನ ಕಾಯಿದೆಯಡಿ ತ್ರಿಚಕ್ರ ವಾಹನಗಳು ದ್ವಿ-ಇಂಧನ (ಪೆಟ್ರೋಲ್ ಮತ್ತು ಎಲ್‌ಪಿಜಿ) ಅಳವಡಿಸಲು ಅನುಮತಿಸಲಾಗಿದೆ.

ಎ) ಸಾರಿಗೆ ಇಲಾಖೆಯ ವರದಿಯಂತೆ ಕಳೆದ ಮೂರು ವರ್ಷಗಳಲ್ಲಿ 9,89,723 ವಾಹನಗಳನ್ನು ಪರೀಕ್ಷಿಸಿ, 27,814 ವಾಹನಗಳಿಂದ ಒಟ್ಟು ರೂ. 34,59,650 ದಂಡವನ್ನು ಸಂಗ್ರಹಿಸಲಾಗಿದೆ.

ಏ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರಿಗೆ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರು ನಗರದಲ್ಲಿ ಸಾಮೂಹಿಕ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.